ಓ.ಎಸ್. ನಂಃ **179/2010**
ಡಿ.ಡಬ್ಲ್ಯೂಃ **1**

ದಿನಾಂಕ **13-01-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್.ಹೆಚ್.ಎಂ.ಜಿ ವಕೀಲರಿಂದಃ

23. ನಿಡಿ-53 ರ ದಾಖಲೆಯಲ್ಲಿ ಗಣಪೂರ ಗ್ರಾಮದ ವತನದಾರ, ಪಟವಾರಿ ರಾಮಕಿಶನ್ ರಾವ್, ಮಾಲಿಪಾಟೀಲ್ ವೀರಪ್ಪ ಹಾಗೂ ಪೋಲಿಸ್ ಪಾಟೀಲ್ ಶಂಕ್ರಪ್ಪ ತಂದೆ ಲಿಂಗಪ್ಪ ರವರ ಹೆಸರುಗಳು ನಮೂದು ಇವೆ ಎಂದರೆ ಸಾಕ್ಷಿಯು ಸರಿ, ಆದರೆ ರಾಮಕಿಶನ್ ರಾವ್ ರವರ ಹೆಸರಿನ ಮುಂದೆ ನನ್ನ ತಂದೆಯ ಹೆಸರು ನಮೂದು ಇದೆ ಎಂದು ನುಡಿಯುತ್ತಾರೆ. ರಾಮಕಿಶನ್ ರಾವ್ ರವರ ಹೆಸರಿನ ಮುಂದೆ ಶ್ರೀ ಹೊನ್ನಪ್ಪ ತಂದೆ ಮಲ್ಲಪ್ಪ ರವರ ಅಂದರೆ ನನ್ನ ತಂದೆಯ ಹೆಸರು ನಮೂದು ಇದೆ ಎಂದರೆ ಸರಿ. ಅದೇ ರೀತಿ ಮಾಲಿ ಪಾಟೀಲ್ ವೀರಪ್ಪ ರವರ ಹೆಸರಿನ ಮುಂದೆ ವೀರಭದ್ರಪ್ಪ ತಂದೆ ವೀರಪ್ಪ ರವರ ಹೆಸರು ನಮೂದು ಇದೆ ಎಂದರೆ ಸರಿ. ಪೋಲಿಸ್ ಪಾಟೀಲ್ ಶಂಕ್ರಪ್ಪ ರವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ನನಗೆ ಗೊತ್ತಿಲ್ಲ. ಅವರಿಗೆ ಮಹಾದೇವಪ್ಪ ಹಾಗೂ ಸಿದ್ದರಾಮಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಮತ್ತು ಮಹಾದೇವಪ್ಪ ವೃತ್ತಿಯಿಂದ ಶಿಕ್ಷಕ ಆಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಮಹಾದೇವಪ್ಪ ರವರು ಸರಕಾರಿ ನೌಕರಿಯಲ್ಲಿ ಇದ್ದರಿಂದ ಹಾಗೂ ಸಿದ್ದರಾಮಪ್ಪ ಮನೆ ಅಳಿಯನಾಗಿ ಹೋಗಿದ್ದರಿಂದ ಶಂಕ್ರಪ್ಪ ರವರ ನಂತರ ಅವರ ಸಬಂಧಿಕ ಮುದಿಯಪ್ಪ ರವರ ಮಗ ಸಂಗಣ್ಣ ಪೋಲಿಸ್ ಪಾಟೀಲ್ ಆಗಿ ನೇಮಕ ಆಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.

24. 1961 ರಲ್ಲಿ ವತನದಾರ ಪದ್ಧತಿಯನ್ನು ರದ್ದುಮಾಡಲು Village Officials Authority Abolition Act ಮಾಡಲಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ನಿಡಿ-53 ರ ದಾಖಲೆಯಲ್ಲಿ ನನ್ನ ತಂದೆ ಹೊನ್ನಪ್ಪ ಯಾವ ದಿನಾಂಕ ಪಟವಾರಿ ಹುದ್ದೆಗೆ ಚಾರ್ಜ್ ತೆಗೆದುಕೊಂಡಿದ್ದರು ಎಂಬುದು ನಮೂದು ಇಲ್ಲ ಎಂದರೆ ಸರಿ. ಆದರೆ ವೀರಪ್ಪ ಮಾಲಿಪಾಟೀಲ್ ಹಾಗೂ ಶಂಕರಪ್ಪ ಪೋಲಿಸ್ ಪಾಟೀಲ್ ರವರು ಕಾರ್ಯನಿರ್ವಹಿಸಿದ ಅವದಿಯ ದಿನಾಂಕಗಳು ನಮೂದು ಇದೆ ಎಂದರೆ ಸರಿ. ಸದರಿ ಮೇಲ್ಕಂಡ ಕಾಯಿದೆ 1963 ರಲ್ಲಿ ಜಾರಿಗೆ ಬಂದಿದ್ದು, ಆ ಪ್ರಕಾರ ಮಾಲಿ ಪಾಟೀಲ್ ಮತ್ತು ಪೋಲಿಸ್ ಪಾಟೀಲ್ ಹುದ್ದೆಗಳು ರದ್ದಾಗಿದ್ದರಿಂದ ವೀರಪ್ಪ ಮತ್ತು ಶಂಕ್ರಪ್ಪ

ರವರ ಹೆಸರುಗಳ ಮುಂದೆ ಹುದ್ದೆ ದುಂಡು ಸುತ್ತಿರುತ್ತಾರೆ ಎಂದರೆ ಸಾಕ್ಷಿಯು ನಿಡಿ-53 ರ ದಾಖಲೆಗಳಲ್ಲಿ ಆ ರೀತಿ ಟಿಪ್ಪಣಿ ನಮೂದು ಇಲ್ಲ ಎಂದು ನುಡಿಯುತ್ತಾರೆ. ಆದರೆ ಪಟವಾರಿ ಹುದ್ದೆ ಬಹಳ ಮುಖ್ಯವಾದ ಆಗಿದ್ದರಿಂದ ಸದರಿ ಹುದ್ದೆಯನ್ನು ರದ್ದುಗೊಳಿಸದೇ ತಾತ್ಕಾಲಿಕವಾಗಿ ಮುಂದುವರಿಸಿದ್ದರು ಎಂದರೆ ಸಾಕ್ಷಿಯು ಅದು ತಾತ್ಕಾಲಿಕವಾಗಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-50 ರ ಪುಟ ನಂ.4 ನ್ನು ತೋರಿಸಿ ಅದರಲ್ಲಿ Village Accountent ಎಂದು ಬರೆದು ಅದರ ಮುಂದೆ Temporary ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಅಲ್ಲಿ ಕೇವಲ Temp ಎಂದು ನಮೂದಿಸಲಾಗಿದೆ ಹಾಗೂ ಅದನ್ನು ಯಾವ ಉದ್ದೇಶಕ್ಕಾಗಿ ನಮೂದಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

25. ನಿಡಿ-54 ರ ದಾಖಲೆಯೊಂದಿಗೆ ಕೊನೆಯ ಪುಟದಲ್ಲಿ ಇರುವ ಖಾಸರಾ ಪಹಣಿ ಪತ್ರಿಕೆಯಲ್ಲಿ 1 ರಿಂದ 15 ನೇ ಕಾಲಂ ಗಳು ಇದ್ದು, ಅದರಲ್ಲಿ ಯಾವುದೇ ಕಾಲಂ ನಲ್ಲಿ ಯಾವುದೇ ವಿವರ ನಮೂದು ಇಲ್ಲ ಎಂದರೆ ಸಾಕ್ಷಿಯು ನಾವು ಕೇವಲ ಪಟವಾರಿ ಸಹಿ ಇರುವ ದಾಖಲಾತಿ ಕೋರಿ ನಕಲು ಪಡೆದುಕೊಂಡಿದ್ದರಿಂದ ಸದರಿ ವಿವರ ನಮೂದು ಇಲ್ಲ, ಆದರೆ ಸದರಿ ಎಲ್ಲಾ ವಿವರಗಳು ಕಚೇರಿಯ ಮೂಲ ಪುಸ್ತಕದಲ್ಲಿ ನಮೂದು ಇದ್ದಾವೆ ಎಂದು ನುಡಿಯುತ್ತಾರೆ. 1961 ರಲ್ಲಿ ಪಟವಾರಿ ಹುದ್ದೆ ರದ್ದಾದ ನಂತರ ಪಟವಾರಿಗಳ ಹತ್ತಿರ ಇದ್ದ ಭೂ-ದಾಖಲೆಗಳನ್ನು ಸರಕಾರಕ್ಕೆ ಒಪ್ಪಿಸುವಂತೆ ಅವರುಗಳಿಗೆ ಸರಕಾರದಿಂದ ನೋಟಿಸ್ ನೀಡಲಾಗಿತ್ತು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆಗ ಪಟವಾರಿಗಳು ತಾವು ಸೇವೆ ಸಲ್ಲಿಸಿದ ಬಗ್ಗೆ ಸಾಕ್ಷಾದಾರ ಬೇಕೆಂದು ಸದರಿ ದಾಖಲಗೆಳನ್ನು ಸರಕಾರಕ್ಕೆ ಒಪ್ಪಿಸಲು ನಿರಾಕರಿಸಿದ್ದರಿಂದ ಸರಕಾರ ದಾಖಲಾತಿಗಳನ್ನು ಸಲ್ಲಿಸಿ ತಾತ್ಕಾಲಿಕ ಪಟವಾರಿಗಳು ಅದರ ವಿವರ ಬರೆದುಕೊಂಡ ನಂತರ ಮರಳಿ ಪಡೆಯಲು ನಿರ್ದೇಶನ ನೀಡಿತ್ತು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಆ ನಂತರ ಪಟವಾರಿಗಳು ಸಲ್ಲಿಸಿದ ವಿವರಗಳನುನ ತಾತ್ಕಾಲಿಕ ಹುದ್ದೆಯಲ್ಲಿ ಇದ್ದ ಕುಲಕರ್ಣಿಗಳು ಪಡೆದುಕೊಂಡು ಪಟವಾರಿಗಳ ಪರವಾಗಿ ಅಂದರೆ ಫತ್ ಎಂದು ನಮೂದಿಸಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-54 ರ 2 ನೇ ಪುಟದಲ್ಲಿ 1954-55 ರ ಖಾಸರಾ ಪಹಣಿ ನಂ.1 ರಿಂದ 63 ರ ಪಹಣಿಗಳನ್ನು ಪಟವಾರಿಗಳು ಸರಕಾರಕ್ಕೆ ಒಪ್ಪಿಸಿದ ಬಗ್ಗೆ ನಮೂದು ಇದ್ದು, ಅದನ್ನು ನೋಡಿ ನಾವು ನಮ್ಮ ತಂದೆ 1946-47 ರಿಂದ ಪಟವಾರಿ ಆಗಿದ್ದರು ಎಂದು ತಪ್ಪಾಗಿ ಅರ್ಥ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಸರಿಯಾಗಿ ಮಾಹಿತಿ ಪಡೆದುಕೊಳ್ಳದೆ ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1964 ರಲ್ಲಿ ಭೂ ಕಂದಾಯ ಕಾಯಿ ಜಾರಿಗೆ ಬರುವ ಪೂರ್ವದಲ್ಲಿ ಗ್ರಾಮದ ಎಲ್ಲಾ ವ್ಯವಹಾರಗಳನ್ನು ಪಟವಾರಿಗಳು

ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿಗೆ ನಿಡಿ-54 ರ ಮೊದಲ ಪುಟ ತೋರಿಸಿ ಅದರಲ್ಲಿ ಖಾಸರಾ ಪಹಣಿ ಗಣಪೂರ 1954-55 ಟೋಟಲ್ 56 ಎಂದು ಬರೆದಿರುವುದು ನಿಮ್ಮ ತಂದೆಯ ಹಸ್ತಾಕ್ಷರದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ತಂದೆಯ ಹಸ್ತಾಕ್ಷರದಲ್ಲಿಯೇ ಇದೆ ಎಂದು ನುಡಿಯುತ್ತಾರೆ. ನಾನು ಮಾಹಿತಿ ಇಲ್ಲದೇ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪುಟದಲ್ಲಿ (69) ಎಂದು ಬರೆದಿರುವುದು ಕಂದಾಯ ಇಲಾಖೆಯ ಗಣಪೂರ ಗ್ರಾಮದ ಕೋಡ್ ಸಂಖ್ಯೆ ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ.

26. ಗಣಪೂರ ಗ್ರಾಮದ ಸರ್ವೆ ನಂ.209/ಇ ತಾಯಮ್ಮ ಪಟ್ಟಿ ಎಂಬ ಹೊಲ ನನ್ನ ತಾತನ ಜಂಟಿ ಕುಟುಂಬದ ಆಸ್ತಿ ಅಗಿತ್ತು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ಹೊಲದಲ್ಲಿ ಒಂದು ಸಣ್ಣ ತಾಯಮ್ಮನ ಗುಡಿ ಇರುವುದರಿಂದ ಅದಕ್ಕೆ ತಾಯಮ್ಮನ ಪಟ್ಟಿ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಸದರಿ ತಾಯಮ್ಮನ ಪಟ್ಟಿ ಹೊಲವನ್ನು ನೋಡಿದ್ದೇನೆ. ಸದರಿ ಜಮೀನು ಗಣಪೂರ ಗ್ರಾಮದ ಗಡಿಭಾಗದಲ್ಲಿ ಕಂದಕೂರು ಹಾಗೂ ಪಸಪೂಲ್ ಗ್ರಾಮದ ಗಡಿಗಳಿಗೆ ಹೊಂದಿಕೊಂಡು ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಸದರಿ ಜಮೀನನ್ನು ನೋಡಿಯೇ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ಒಟ್ಟು 06 ಎಕರೆ 33 ಗುಂಟೆ ಇದ್ದು, ಆ ಪೈಕಿ 03 ಎಕರೆ 17 ಗುಂಟೆಯನ್ನು ನನ್ನ ತಾತ ದಿನಾಂಕ 16.10.1978 ರಂದು ಮಲ್ಲಪ್ಪ ಆವಂಟಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ-25 ಎಂದು ಗುರುತಿಸಲಾಗಿದೆ ಎಂದರೆ ಸರಿ. ಉಳಿದ ಅರ್ಧ ಜಮೀನನ್ನು ಅದೇ ದಿನ ನನ್ನ ತಾತ ಗುಂಡಪ್ಪ ಎಂಬುವವರಿಗೆ ಮಾರಾಟ ಮಾಡಿದ್ದು, ಸದರಿ ಖರೀದಿ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ-26 ಎಂದು ಗುರುತಿಸಲಾಗಿದೆ ಎಂದರೆ ಸರಿ. ನೊಂದಣಾಧಿಕಾರಿಗಳ ಕಚೇರಿಯ ಪುಸ್ತಕದಲ್ಲಿ ಮಾರಾಟಗಾರನ ಹಾಗೂ ಖರೀದಿದಾರನ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಅದಕ್ಕೆ Tumb Impression Register ಎನ್ನುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿಗೆ ನಿಪಿ-51 ರ ದಾಖಲೆಯನ್ನು ತೋರಿಸಿ ಅದರಲ್ಲಿ ಮಾರಾಟಗಾರರಾದ ನಿಮ್ಮ ಅಜ್ಜ ಮಲ್ಲಪ್ಪ ರವರ ಮೋಡಿ ಭಾಷೆಯಲ್ಲಿನ ಸಹಿ ಹಾಗೂ ಅವರ ಹೆಬ್ಬೆಟ್ಟಿನ ಗುರುತು ಇದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾತ ಕೊಂಕಲ್ ಗ್ರಾಮದಲ್ಲಿ ಒಂದು ಜಮೀನು ಖರೀದಿಸುವ ಉದ್ದೇಶದಿಂದ ಸದರಿ ಮೇಲ್ಕಂಡ ಜಮೀನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಸೋದರ ಅತ್ತೆ ಶಂಕ್ರಮ್ಮ ರವರನ್ನು ಕೊಂಕಲ್ ಗ್ರಾಮದ ಗಿರೆಪ್ಪರವರಿಗೆ ಕೊಟ್ಟು ಮದುವೆ

ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಶಂಕ್ರಮ್ಮ ರವರಿಗೆ ಸಾಬಣ್ಣ ಎಂಬ ಮಗ ಇದ್ದರು ಎಂದರೆ ಸರಿ. ನಂತರ ಶಂಕ್ರಮ್ಮ ರವರ ಗಂಡ ತೀರಿಕೊಂಡಿದ್ದರಿಂದ ಆ ಗ್ರಾಮದಲ್ಲಿ ಜಮೀನು ಇದ್ದರೆ ತಮ್ಮ ಮಕ್ಕಳು ಹೋಗಿ ಬರುವುದು ಮಾಡುತ್ತಿದ್ದರೆ ಶಂಕ್ರಮ್ಮ ರವರಿಗೆ ಧೈರ್ಯ ಇರುತ್ತದೆ ಎಂದು ನನ್ನ ತಾತ ಉದ್ದೇಶ ಹೊಂದಿದ್ದರು ಎಂದರೆ ಸರಿಯಲ್ಲ. ನಿಪಿ-53 ರ ದಾಖಲೆಯಲ್ಲಿ ಸರ್ವೆ ನಂ.209/ಇ ನಮೂದು ಇದೆ ಎಂದರೆ ಸಾಕ್ಷಿಯು ಅದನ್ನು ನೀವೆ ತಯಾರಿಸಿಕೊಂಡಿದ್ದೀರಾ ಎಂದು ನುಡಿದಿರುತ್ತಾರೆ.

27. ನಿಮ್ಮ ತಾತ ಹಾಗೂ ತಂದೆಗೆ ಇಂಗ್ಲೀಷ್ ಬಾಷೆ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ತಕ್ಕ ಮಟ್ಟಿಗೆ ಅರ್ಥ ಅಗುತ್ತಿತ್ತು, ಆದರೆ ಬರೆಯಲು ಬರುತ್ತಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-52 ರ ದಾಖಲೆಯಲ್ಲಿನ ವಿವರ ಇಂಗ್ಲೀಷ್ ಭಾಷೆಯಲ್ಲಿ ಇದೆ ಎಂದರೆ ಸರಿ. ನಿಪಿ-52 ರಿಂದ ವಂಶವೃಕ್ಷದ ವರೆಗಿನ ದಾಖಲೆಗಳನ್ನು ಮಾತ್ರ ನಿಮ್ಮ ತಂದೆ ಹಾಗೂ ತಾತ ನೀಡಿದ ಮಾಹಿತಿಯಂತೆ ಶ್ರೀ ಎಸ್ ಹನುಮಂತನಾದ ನಾನು ನನ್ನ ಹಸ್ತಾಕ್ಷರದಲ್ಲಿ ತುಂಬಿದ್ದು ಉಳಿದ ಮುಂದಿನ ದಾಖಲೆಗಳನ್ನು ಕಚೇರಿಯವರು ಸ್ವತಃ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಹಾಗೂ ತಾತ ಆ ರೀತಿ ಯಾವುದೇ ಮಾಹಿತಿ ನೀಡಿಲ್ಲ ಹಾಗೂ ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ನಿಪಿ-56, 57 ಮತ್ತು 61 ರ ದಾಖಲೆಗಳಲ್ಲಿ ಸರ್ವೆ ನಂ.209/ಇ ಹಾಗೂ ಸರ್ವೆ ನಂ.3 ಎರಡೂ ಸಹ ನಮೂದು ಇದೆ ಎಂದರೆ ಸಾಕ್ಷಿಯು ಅವುಗಳೆಲ್ಲ ನೀವೆ ತಯಾರಿಸಿಕೊಂಡಿರುವ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ.

(ನ್ಯಾಯಾಲಯದ ಕಲಾಪದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಗಿದೆ)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ